ದಿನಾಂಕಃ **17.08.2024** ರಂದು ಮಧ್ಯಂತರ ಅರ್ಜಿ ಸಂ. **15** ಮತ್ತು **16** ರ ಆದೇಶದಂತೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **: 9** ನೇ ಪ್ರತಿವಾದಿಯ ಪರ ಶ್ರೀ ಜಿ.ಜಿ.ಐ. ವಕೀಲರಿಂದಃ

02. ನಾನು ಇಂಜಿನಿಯರಿಂಗ್ ಪದವಿ ವ್ಯಾಸಂಗ ಮಾಡಿದ್ದೇನೆ. ನನ್ನ ಜನ್ಮ ದಿನಾಂಕ 11.05.1996 ಇರುತ್ತದೆ. ಎಲ್ಲಾ ದಾವಾ ಸ್ವತ್ತುಗಳು ನನ್ನ ತಾತ ಕೊಟ್ರಗೌಡರವರ ಆಸ್ತಿಗಳು ಎಂದರೆ ಸರಿ. ನನ್ನ ಅಜ್ಜ ಕೊಟ್ರಗೌಡ ನಾನು ಹುಟ್ಟುವ ಮುಂಚೆಯೇ ದಿನಾಂಕ 23.03.1996 ರಂದು ಮೃತಪಟ್ಟಿದ್ದರು ಎಂದರೆ ಸರಿ. ನನ್ನ ಅಜ್ಜನು ಮರಣ ಹೊಂದುವಾಗ ಆತನ ಹೆಂಡತಿ ನೀಲಮ್ಮ, ಮಕ್ಕಳಾದ ಬಸವನಗೌಡ, ರಾಮನಗೌಡ, ಮಂಜುನಾಥಗೌಡ, ಮಂಜುಳಾ, ಸಂಗನಗೌಡ, ಚನ್ನಬಸವನಗೌಡ ಮತ್ತು ತಾಯವ್ವ ಇವರನ್ನು ವಾರಸುದಾರರಾಗಿ ಬಿಟ್ಟು ಮೃತಪಟ್ಟಿದ್ದರು ಎಂದರೆ ಸರಿ. ನನ್ನ ಅಜ್ಜನ ಮರಣಾ ನಂತರ ಆತನ ವಾರಸುದಾರರ ನಡುವೆ ದಾವಾ ಸ್ವತ್ತುಗಳ ಪಾಲುವಿಭಾಗದ ಬಗ್ಗೆ ವಿವಾದ ಉಂಟಾಗಿತ್ತು ಎಂಬ ಬಗ್ಗೆ ನನಗೆ ಗೊತ್ತಿದೆಯೇ? ಎಂದರೆ ಗೊತ್ತಿಲ್ಲ. ಸದರಿ ವಿವಾದ ಉಂಟಾದ ನಂತರ ನನ್ನ ತಂದೆ ಮಂಜುನಾಥಗೌಡ ರವರು ದಿನಾಂಕ 09.11.1998 ರಂದು ಮೃತಪಟ್ಟರು ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ ನನ್ನ ತಾಯಿಗೆ ಮತ್ತು ನನ್ನ ತಂದೆಯ ತಾಯಿ ಹಾಗೂ ಉಳಿದ ಸಹೋದರರಿಗೆ ದಾವಾ ಸ್ವತ್ತುಗಳ ವಿಭಾಗ ಮಾಡಿಕೊಳ್ಳುವ ಬಗ್ಗೆ ಊರಿನಲ್ಲಿ ಪಂಚಾಯಿತಿಗಳು ಮತ್ತು ಮಾತುಕತೆಗಳು ನಡೆದಿದ್ದವು ಎಂದರೆ ಸರಿಯಲ್ಲ. ಇಸವಿ 2000 ರಲ್ಲಿ ನನ್ನ ತಾಯಿ ಹಾಗೂ ನನ್ನ ತಂದೆಯ ಸಹೋದರರು ಮತ್ತು ನನ್ನ ತಂದೆಯ ತಾಯಿ ನಡುವೆ ಆಸ್ತಿ ವಿಭಾಗದ ಬಗ್ಗೆ ಒಂದು ಕುಟುಂಬ ವ್ಯವಸ್ಥೆಯು ಉಂಟಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 09.06.2000 ರಂದು ನನ್ನ ತಾಯಿ, ನನ್ನ ಅಜ್ಜಿ ಮತ್ತು ನನ್ನ ತಂದೆಯ ಸಹೋದರರ ನಡುವೆ ದಾವಾ ಸ್ವತ್ತುಗಳ ಹಂಚಿಕೆ ಕುರಿತಂತೆ ಕರಾರುಗಳು ಆಗಿದ್ದವು ಎಂದರೆ ಸರಿಯಲ್ಲ. ನನ್ನ ತಾಯಿ, ನನ್ನ ಅಜ್ಜಿ ಮತ್ತು ನನ್ನ ತಂದೆಯ ಸಹೋದರರ ಸಹಿಗಳ ಬಗ್ಗೆ ಮತ್ತು ಅವರೆಲ್ಲರೂ ಮಾಡಿರುವ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ.

03. ದಿನಾಂಕ 09.06.2000 ರಂದು ನನ್ನ ತಾಯಿ, ನನ್ನ ಅಜ್ಜಿ ಮತ್ತು ಉಳಿದ ಕುಟುಂಬ ಸದಸ್ಯರ ನಡುವೆ ನಡೆದ ಕರಾರು ಮತ್ತು ಕುಟುಂಬ ವ್ಯವಸ್ಥೆಯ ಸಮಯದಲ್ಲಿ ಅವರೆಲ್ಲರೂ ಹಾಜರಿದ್ದರು ಎಂದರೆ ಸರಿ. ಸದರಿ ದಿನಾಂಕದಂದು ನಮ್ಮ ಕುಟುಂಬ ಸಧ್ಯಸರ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಒಂದು ಸಮನಾದ ಪಾಲುವಿಭಾಗ ನಡೆದಿತ್ತು ಎಂದರೆ ಸರಿಯಲ್ಲ. ದಿನಾಂಕ 09.06.2000 ರ ಸದರಿ ಪಾಲುವಿಭಾಗದಲ್ಲಿ ನನ್ನ ದೊಡ್ಡಪ್ಪ ಬಸವನಗೌಡರವರಿಗೆ ಸ.ನಂ. 243 ರಲ್ಲಿ 3 ಎಕರೆ 22 ಸೆಂಟ್ಸ್ ಸ. ನಂ. 176 ರಲ್ಲಿ 7 ಎಕರೆ 18

ಸೆಂಟ್ಸ್ ಮತ್ತು ಸ. ನಂ. 177 ರಲ್ಲಿ 4 ಎಕರೆ ಜಮೀನುಗಳನ್ನು ಹಿಸ್ಸೆಯಾಗಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗ ಕುಟುಂಬ ವ್ಯವಸ್ಥೆಯಲ್ಲಿ ನನ್ನ ಅಜ್ಜಿ 1 ನೇ ಪ್ರತಿವಾದಿಗೆ ಸ.ನಂ.175/ಇ ಯಲ್ಲಿ 2 ಎಕರೆ 95 ಸೆಂಟ್ಸ್ ಮತ್ತು ಸ. ನಂ. 233 ರಲ್ಲಿ 3 ಎಕರೆ ಜಮೀನುಗಳನ್ನು ಹಿಸ್ಸೆಯಾಗಿ ಕೊಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಸಂಗನಗೌಡ ಇವರ ಹಿಸ್ಸೆಗೆ ಸ.ನಂ.176 ರಲ್ಲಿ 2 ಎಕರೆ , ಸ. ನಂ. 177 ರಲ್ಲಿ 4 ಎಕರೆ 35 ಸೆಂಟ್ಸ್ ಮತ್ತು ಸ. ನಂ. 179 ರಲ್ಲಿ 6 ಎಕರೆ 84 ಸೆಂಟ್ಸ್ ಜಮೀನುಗಳನ್ನು ಹಿಸ್ಸೆಯಾಗಿ ಕೊಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ಇನ್ನೊಬ್ಬ ಚಿಕ್ಕಪ್ಪ ಚನ್ನಬಸವನಗೌಡರವರ ಹಿಸ್ಸೆಗೆ ಸ.ನಂ. 175 ರಲ್ಲಿ 5 ಎಕರೆಯನ್ನು ಹಿಸ್ಸೆಯಾಗಿ ಕೊಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಕುಟುಂಬ ವ್ಯವಸ್ಥೆಯಲ್ಲಿ ನನ್ನ ತಂದೆಯ ಹಿಸ್ಸೆಯಾಗಿ ಸ.ನಂ. 230/ಎ ನಲ್ಲಿ 5 ಎಕರೆ 32 ಸೆಂಟ್ಸ್ ಮತ್ತು ಸ. ನಂ. 233 ರಲ್ಲಿ 2 ಎಕರೆ 50 ಸೆಂಟ್ಸ್ ಜಮೀನುಗಳನ್ನು ನನ್ನ ತಾಯಿಗೆ ಹಿಸ್ಸೆಯಾಗಿ ಕೊಡಲಾಗಿತ್ತು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಪ್ರಕಾರವಾಗಿ ನನ್ನ ಅಜ್ಜ ಕೊಟ್ರಗೌಡ ರವರ ಮರಣಾ ನಂತರ ನನ್ನ ಅಜ್ಜಿಯನ್ನೂ ಸೇರಿಸಿ ಎಲ್ಲಾ ಕುಟುಂಬ ಸದಸ್ಯರು ತಾವೇ ಸ್ವಂತ ಒಪ್ಪಿಗೆ ಮೇರೆಗೆ ಈ ರೀತಿಯ ಸಮಾನವಾದ ವಿಭಾಗವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

04. ಸದರಿ ಕುಟುಂಬ ವ್ಯವಸ್ಥೆಯ ಪಕ್ಷಕಾರರು ಎಲ್ಲರೂ ಪಾಲುವಿಭಾಗದ ಷರತ್ತುಗಳನ್ನು ಮತ್ತು ಅವರ ಹಿಸ್ಸೆಗಳನ್ನು ನಮೂದಿಸಿ ಬರವಣಿಯಲ್ಲಿ ಒಂದು Memorandum of Partition ದಾಖಲೆ ಮಾಡಿಕೊಂಡು ಸಹಿಗಳನ್ನು ಹಾಕಿದ್ದರು ಎಂದರೆ ಸರಿಯಲ್ಲ. ಸದರಿ ದಾಖಲೆ ಸಮೇತ ನನ್ನ ತಾಯಿ, ನನ್ನ ಅಜ್ಜಿ ಮತ್ತು ಪಾಲುವಿಭಾಗದ ಉಳಿದ ಪಕ್ಷಕಾರರು ಎಲ್ಲರೂ ಅವರವರ ವರದಿಗಳ ಪ್ರಕಾರ ತಮ್ಮ ತಮ್ಮ ಹಿಸ್ಸೆಯಂತೆ ಖಾತೆ ಬದಲಾವಣೆ ಕೋರಿ ಕಂದಾಯ ಅಧಿಕಾರಿಗಳಿಗೆ ಅರ್ಜಿಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ಪಾಲುವಿಭಾಗ ಪಕ್ಷಕಾರರ ಹೆಸರುಗಳಿಗೆ ಅವರವರ ಹಿಸ್ಸೆ ಪ್ರಕಾರ ಖಾತೆ ಬದಲಾವಣೆ ಕೂಡಾ ಆದವು ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಪ್ರಕಾರವಾಗಿ ನನ್ನ ಅಜ್ಜಿ, ನನ್ನ ಅಜ್ಜಿಯ ಮಕ್ಕಳು ಹಾಗೂ ನನ್ನ ತಾಯಿಯ ಹೆಸರುಗಳಿಗೆ ಪ್ರತ್ಯೇಕವಾಗಿ ಖಾತೆಗಳು ನಮೂದಾಗಿ ಆ ಬಗ್ಗೆ ಪಹಣಿಗಳಲ್ಲಿ ಕೂಡಾ ನಮೂದಾಗುವ ಮೂಲಕ ಪಾಲುವಿಭಾಗ ಷರತ್ತುಗಳು ಜಾರಿಗೆ ಬಂದವು ಎಂದರೆ ಸರಿಯಲ್ಲ. ದಿನಾಂಕ 09.06.2000 ರ ಪಾಲುವಿಭಾಗದ ಷರತ್ತುಗಳು ಜಾರಿಗೆ ಬಂದು ಆ ಪ್ರಕಾರ ಬದಲಾದ ಖಾತೆ ಬದಲಾವಣೆ ಹಾಗೂ ಪಹಣಿಗಳ ವಿರುದ್ಧ ನನ್ನ ತಾಯಿ ಅಥವಾ ನಾನು ಯಾವುದಾದರೂ ತಕರಾರು ಅಥವಾ ಮೇಲ್ಮನವಿಯನ್ನು ಸಲ್ಲಿಸಿದ್ದುಂಟೇ? ಎಂದರೆ ಸಲ್ಲಿಸಿಲ್ಲ. ಖಾತೆ ಮತ್ತು ಪಹಣಿ ಬದಲಾವಣೆಗಳು ಜಾರಿಗೆ ಬಂದ ನಂತರ 1 ನೇ ಪ್ರತಿವಾದಿ ಹಾಗೂ ಆಕೆಯ ಮಕ್ಕಳು ಎಲ್ಲರೂ ಅವಿಭಕ್ತ ಕುಟುಂಬದಿಂದ ಬೇರೆ ಬೇರೆಯಾದರು ಎಂದರೆ ಸರಿಯಲ್ಲ.

05. ದಿನಾಂಕ 19.01.2002 ರಂದು ನನ್ನ ದೊಡ್ಡಪ್ಪ ಬಸವನಗೌಡ ಮೃತಪಟ್ಟರು ಎಂದರೆ ಸರಿ. ನನ್ನ ಚಿಕ್ಕಪ್ಪ ಸಂಗನಗೌಡ ದಿನಾಂಕ 26.07.2005 ರಂದು ಮೃತಪಟ್ಟರು ಎಂದರೆ ಸರಿ. ನನ್ನ ದೊಡ್ಡಪ್ಪ ರಾಮನಗೌಡ ದಿನಾಂಕ 22.07.2007 ರಂದು ಮೃತಪಟ್ಟರು ಎಂದರೆ ಸರಿ. ನನ್ನ ಇನ್ನೊಬ್ಬ ಚಿಕ್ಕಪ್ಪ ಚನ್ನಬಸವನಗೌಡ ದಿನಾಂಕ 20.01.2012 ರಂದು ಮೃತಪಟ್ಟರು ಎಂದರೆ ಸರಿ. ಇವರೆಲ್ಲರೂ ಮೃತಪಟ್ಟ ನಂತರ ಇವರೆಲ್ಲರಿಗೆ ದಿನಾಂಕ 09.06.2000ರ ಪಾಲುವಿಭಾಗದಂತೆ ಖಾತೆ ಬದಲಾವಣೆಯಾಗಿದ್ದ ಆಸ್ತಿಗಳ ಖಾತೆ ಬದಲಾವಣೆಯು ಅವರವರ ವಾರಸುದಾರರ ಹೆಸರುಗಳಿಗೆ ನಮೂದಾದವು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಸಂಗನಗೌಡ ತೀರಿಕೊಂಡ ನಂತರ ಅವರ ಹಿಸ್ಸೆಗೆ ಬಂದಿದ್ದ ಸ. ನಂ. 176ರಲ್ಲಿ 2 ಎಕರೆ, ಸ.ನಂ. 177ರಲ್ಲಿ 4 ಎಕರೆ 22 ಸೆಂಟ್ಸ್ ಮತ್ತು ಸ.ನಂ.179ರಲ್ಲಿ 6 ಎಕರೆ 84 ಸೆಂಟ್ಸ್ ಸದರಿಯವರ ಹೆಂಡತಿ ನಿರ್ಮಲಾರವರ ಹೆಸರಿಗೆ ಖಾತೆ ಬದಲಾವಣೆ ಆದವು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಸಂಗನಗೌಡರವರು ತಮ್ಮ ಜೀವನ ನಿರ್ವಹಣೆಗೆ ಕೃಷಿಯನ್ನು ಮಾತ್ರ ಅವಲಂಬಿಸಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪ ಸಂಗನಗೌಡ ಮತ್ತು ನನ್ನ ಚಿಕ್ಕಮ್ಮ ನಿರ್ಮಲಾರವರಿಗೆ ಯಾವುದೇ ಸಂತಾನ ಇರಲಿಲ್ಲ ಎಂದರೆ ಸರಿ. ನನ್ನ ಚಿಕ್ಕಪ್ಪ ಸಂಗನಗೌಡರವರು ವಾಸಿಯಾಗದ ಕಾಯಿಲೆಯಿಂದ ತೀರಿಕೊಂಡರು ಎಂದರೆ ಅವರ ಮರಣದ ಕಾರಣವೇನೆಂದು ನನಗೆ ಗೊತ್ತಿಲ್ಲ. ನನ್ನ ಚಿಕ್ಕಮ್ಮ ನಿರ್ಮಲಾ ಕೂಡಾ ಅದೇ ರೀತಿಯ ವಾಸಿಯಾಗದ ಕಾಯಿಲೆಗೆ ತುತ್ತಾಗಿ ಹಾಸಿಗೆ ಹಿಡಿದು ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ನನ್ನ ಚಿಕ್ಕಪ್ಪ ತೀರಿಕೊಂಡ ನಂತರ ನನ್ನ ಚಿಕ್ಕಮ್ಮ ನಿರ್ಮಲಾ ತನ್ನ ತಂದೆ ಹನುಮಂತಪ್ಪ ಉದ್ದಾರ ಇವರ ಸಂರಕ್ಷಣೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನ ವೈದ್ಯಕೀಯ ಖರ್ಚುಗಳಿಗಾಗಿ ಕಾನೂನುಬದ್ಧ ಅವಶ್ಯಕತೆಗೋಸ್ಕರ ಸ.ನಂ.179 ರಲ್ಲಿ 6 ಎಕರೆ 84 ಸೆಂಟ್ಸ್ ಮತ್ತು ಸ. ನಂ. 177ರಲ್ಲಿ 4 ಎಕರೆ 85 ಸೆಂಟ್ಸ್ ಜಮೀನುಗಳನ್ನು 9ನೇ ಪ್ರತಿವಾದಿಗೆ ಮಾರಾಟ ಮಾಡಲು ಮಾತುಕತೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮ ನಿರ್ಮಲಾರವರಿಗೆ ಕಾಯಿಲೆ ಇದ್ದು ಅವರು ಕ್ರಯ ಪತ್ರ ನೋಂದಣಿ ಮಾಡಿಸಿಕೊಡಲು ಉಪನೋಂದಣಿ ಕಚೇರಿಗೆ ಹೋಗಲು ಸಾಧ್ಯವಾಗದೇ ಇದ್ದಿದ್ದರಿಂದ ಆಕೆಯ ತಂದೆ ಹನುಮಂತಪ್ಪ ಉದ್ದಾರ ಇವರಿಗೆ ಜಿಪಿಎ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನ ವೈದ್ಯಕೀಯ ಖರ್ಚುಗಳಿಗೋಸ್ಕರ ಆಕೆಯು ಈ ಎರಡೂ ಜಮೀನುಗಳನ್ನು 9ನೇ ಪ್ರತಿವಾದಿಗೆ ನೋಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿಸಿದರು ಎಂದರೆ ಸರಿಯಲ್ಲ . 9ನೇ ಪ್ರತಿವಾದಿಯೂ ಜಿಪಿಎ ಕ್ರಯ ಪತ್ರದ ಮೂಲಕ ಖರೀದಿಸಿದ ಈ ಎರಡೂ ಜಮೀನುಗಳ ಸ್ವಾಧೀನ ಮತ್ತು ಅನುಭೋಗದಲ್ಲಿ ಕ್ರಯ ಮಾಡಿದ ದಿನಾಂಕದಿಂದಲೂ ಇರುತ್ತಾರೆ ಎಂದರೆ ಇಲ್ಲ , ಅವು ನಮ್ಮ ಸ್ವಾಧೀನದಲ್ಲೇ ಇರುತ್ತವೆ. 2010ರಲ್ಲಿ ಈ ಎರಡೂ ಜಮೀನುಗಳನ್ನು ಕ್ರಯ ಮಾಡಿದ ನಂತರ ನನ್ನ ಚಿಕ್ಕಮ್ಮ ನಿರ್ಮಲಾರವರು 2 ವರ್ಷಗಳ ಬಳಿಕ ದಿನಾಂಕ 27.10.2012 ರಂದು ಮೃತಪಟ್ಟರು

ಎಂದರೆ ಮೃತಪಟ್ಟಿರುವುದನ್ನು ಒಪ್ಪುತ್ತೇನೆ ಆದರೆ ಕ್ರಯ ಮಾಡಿದ್ದಾರೆ ಎನ್ನುವುದನ್ನು ಒಪ್ಪುವುದಿಲ್ಲ ನಿರ್ಮಲಾರವರು ತಮ್ಮ ಕೊನೆಯ ಕ್ಷಣಗಳನ್ನು ದಾವಣಗೆರೆಯ ಚಿಗಟೇರಿ ಆಸ್ಪತ್ತೆಯಲ್ಲಿ ಕಳೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಚಿಕ್ಕಮ್ಮ ನಿರ್ಮಲಾರವರು ಆಕೆಯ ತಂದೆಯನ್ನು ಜಿಪಿಎ ಮಾಡಿದ ನಂತರ ಆ ಬಗ್ಗೆ ಯಾವತ್ತೂ ಪ್ರಶ್ನೆ ಮಾಡಿರಲಿಲ್ಲ ಎಂದರೆ ಅವರು ಜಿಪಿಎ ಕೊಟ್ಟಿರುವುದಿಲ್ಲ. ಈ ದಾವೆ ಹಾಕುವ ಮುಂಚೆ ದಾವಾ ಸ್ವತ್ತುಗಳಲ್ಲಿ ಈ ಎರಡು ಆಸ್ತಿಗಳು ಯಾವ ರೀತಿ ಮತ್ತು ಯಾವ ಆಧಾರದ ಮೇಲೆ ಕ್ರಯವಾಗಿವೆ ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿದ್ದುಂಟೇ? ಎಂದರೆ ಮಾಡಿದ್ದೇನೆ. ಆ ರೀತಿ ದಾಖಲೆಗಳ ಪರಿಶೀಲನೆ ಮಾಡುವಾಗ ನಿರ್ಮಲಾರವರು ಅವರ ತಂದೆಗೆ ಜಿಪಿಎ ಕೊಟ್ಟು ಕ್ರಯ ಮಾಡಿಸಿರುವ ಸಂಗತಿಯು ನನ್ನ ಗಮನಕ್ಕೆ ಬಂದಿತ್ತೇ ? ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಬಂದಿಲ್ಲ, ನಾನು ಜಿಪಿಎ ಮಾಡಿಕೊಟ್ಟಿಲ್ಲವೆಂದು ಹೇಳುತ್ತೇನೆ ಎಂದು ಉತ್ತರಿಸಿದ್ದಾರೆ. ನಾವಾಗಲೀ ಅಥವಾ ನಿರ್ಮಲಾರವರಾಗಲೀ ಹನುಮಂತಪ್ಪ ಉದ್ಧಾರ ರವರಿಗೆ ಮಾಡಿಕೊಟ್ಟ ಜಿಪಿಎ ಯನ್ನು ಪ್ರಶ್ನೆ ಮಾಡದೇ ಇರುವ ಕಾರಣದಿಂದ ಸದರಿ ಜಿಪಿಎ ಮೂಲಕ ಈ ಎರಡು ಆಸ್ತಿಗಳನ್ನು ಖರೀದಿ ಮಾಡಿದ 9 ನೇ ಪ್ರತಿವಾದಿಯು ಇವುಗಳ ಸಂಪೂರ್ಣ ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ.

06. ನನ್ನ ಅಜ್ಜಿ 1 ನೇ ಪ್ರತಿವಾದಿಯು ಆಕೆಯ ಹಿಸ್ಸೆಗೆ ಬಂದಿದ್ದ ಸ. ನಂ. 223 ರಲ್ಲಿ 3 ಎಕರೆ ಜಮೀನನ್ನು ದಿನಾಂಕ 27.10.2005 ರಂದು ಕ್ರಯ ಪತ್ರದ ಮೂಲಕ ಎಚ್ ಎಂ. ಗುರುಲಿಂಗಯ್ಯ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಿನಾಂಕ 22.07.2013 ರಂದು ಸ.ನಂ. 225 ರಲ್ಲಿ 5 ಎಕರೆ 40 ಸೆಂಟ್ಸ್ ಜಮೀನನ್ನು ಬೆಂಗಳೂರಿನ ಅಕ್ಕಿ ಭರತಕುಮಾರ್ ರವರಿಗೆ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ . ನನ್ನ ಅಜ್ಜಿಯ ಮೂಲಕ ಖರೀದಿ ಮಾಡಿದ ವ್ಯಕ್ತಿಗಳನ್ನು ಮತ್ತು ನನ್ನ ಅಜ್ಜಿ ಮಾರಾಟ ಮಾಡಿದ ಆಸ್ತಿಗಳನ್ನು ಈ ದಾವೆಗೆ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ನನ್ನ ದೊಡ್ಡಪ್ಪ ರಾಮನಗೌಡನು ಆತನ ಹಿಸ್ಸೆಗೆ ಬಂದ ಜಮೀನನ್ನು ಹೂವಿನಹಡಗಲಿಯ ಕೈಲಾಸ್ ಶೆಟ್ಟಿ ಯವರಿಗೆ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ, ನಾನು ಹೇಳುತ್ತೇನೆ, ಯಾವ ಯಾವ ಜಮೀನುಗಳು ಸಂಬಂಧಪಟ್ಟವೆಯೋ ಅವೆಲ್ಲವನ್ನೂ ಸೇರಿಸಿ ದಾವೆ ಹಾಕಿದ್ದೇನೆ. 9 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿಗಳ ವಿರುದ್ಧ ನನ್ನ ಅಜ್ಜಿ 1 ನೇ ಪ್ರತಿವಾದಿಯು ಹೂವಿನಹಡಗಲಿ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಘೋಷಣಾತ್ಮಕ ಡಿಕ್ರಿ ಕೋರಿ ಓ.ಎಸ್. ನಂ. 74/2014 ನ್ನು ದಾಖಲು ಮಾಡಿದ್ದಾರೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯು ಸದರಿ ದಾವೆಯಲ್ಲಿ ನನ್ನ ಚಿಕ್ಕಮ್ಮ ನಿರ್ಮಲಾ, ಆಕೆಯ ತಂದೆ ಹನುಮಂತ ಉದ್ಧಾರ ಹಾಗೂ 9 ನೇ ಪ್ರತಿವಾದಿಯನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಆ ದಾವೆಯಲ್ಲಿ ನನ್ನನ್ನೂ ಕೂಡಾ

ಪ್ರತಿವಾದಿಯನ್ನಾಗಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಓ.ಎಸ್. ನಂ. 74/2014 ರ ದಾವೆಯ ವಾದಿಯಾದ 1 ನೇ ಪ್ರತಿವಾದಿಯು ಆ ದಾವೆಯಲ್ಲಿ ಸಲ್ಲಿಸಿದ ವಾದ ಪತ್ರದಲ್ಲಿ ದಿನಾಂಕ09.06.2000 ರ ಪಾಲುವಿಭಾಗದ ಬಗ್ಗೆ ಒಪ್ಪಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿನ ವಾದಿ ಮತ್ತು ಈ ದಾವೆಯ 1 ನೇ ಪ್ರತಿವಾದಿಯಾದ ನನ್ನ ಅಜ್ಜಿಯು ದಿನಾಂಕ 09.06.2000 ರ ಪಾಲುವಿಭಾಗವನ್ನು ಮತ್ತು ನನ್ನ ಚಿಕ್ಕಮ್ಮ ನಿರ್ಮಲಾ ರವರು 9 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರವನ್ನು ರದ್ದತಿ ಪರಿಹಾರ ಕೋರಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ.. ನಾನು, ನನ್ನ ತಾಯಿ, 1 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳು ಎಲ್ಲರೂ ಶಾಮೀಲಾಗಿ ಆಸ್ತಿ ಖರೀದಿ ಮಾಡಿದ 9 ನೇ ಪ್ರತಿವಾದಿಯಿಂದ ಹಣ ವಸೂಲು ಮಾಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯಿಂದ ಹೆಚ್ಚುವರಿ ಹಣ ವಸೂಲು ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳು ಸಂಗತಿಗಳಿಂದ ಕೂಡಿದ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 09.06.2000 ರ ವಿಭಾಗ ಪತ್ರ, ನಿರ್ಮಲಾರವರು ಬರೆದುಕೊಟ್ಟ ಜಿಪಿಎ ಹಾಗೂ ಅದರ ಮೂಲಕ 9 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರ ಇವೆಲ್ಲವೂ ನನ್ನ ಮೇಲೆ ಬಂಧಕವಾಗುವ ಕಾರಣದಿಂದ ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಿಸ್ಸೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹೂವಿನ ಹಡಗಲಿ.**